**<u>ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ</u>**
**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಜಿ ಬಿ ಪಿ ವಕೀಲರಿಂದಃ</u>**

ದಾವಾದಲ್ಲಿ ಸಿ ಶೆಡ್ಯೂಲ್ ನ ಐಟಂ ನಂ.2 ಆಸ್ತಿ ಮತ್ತು ಡಿ ಶೆಡ್ಯೂಲ್ ಐಟಂ ನಂ.9 ಆಸ್ತಿ ಒಂದೇ ಎಂದರೆ ಸರಿಯಲ್ಲ. ಈ ಆಸ್ತಿ ಶಾರದಮ್ಮ ಕೋಂ ಶಿಮೂರ್ತಿಪ್ಪ ಇವರಿಂದ ನನ್ನ ಅಣ್ಣ ಮತ್ತು ಅತ್ತಿಗೆ ಖರೀದಿ ಮಾಡಿದ್ದಾರೆ ಎಂದರೆ ಇಲ್ಲ ಅದು ನನ್ನ ತಾತನ ಆಸ್ತಿ ಎಂದು ಹೇಳುತ್ತಾರೆ. ಇದೇ ಆಸ್ತಿಯನ್ನು ನನ್ನ ಅಣ್ಣ ಅತ್ತಿಗೆ ಇವರು ಗಂಗಮ್ಮ ಕೋಂ ಬಸಪ್ಪ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಇಲ್ಲ ನನ್ನ ತಂದೆಯೇ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಶಾರದಮ್ಮ ಮತ್ತು ಗಂಗಮ್ಮ ರವರ ಹುಟ್ಟೂರು ನಮ್ಮ ಊರೇ ಎಂದರೆ ಹೌದು. ಶಾರದಮ್ಮ ಮತ್ತು ಗಂಗಮ್ಮ ಅಕ್ಕ ತಂಗಿಯರು ಎಂದರೆ ಹೌದು. ಆದ್ದರಿಂದ ಸದರಿ ಆಸ್ತಿ ಶಾರದಮ್ಮ ಮತ್ತು ಗಂಗಮ್ಮನಿಗೆ ಸೇರಿದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಆಸ್ತಿ ಶಾರದಮ್ಮನವರ ಖಾತೆಯಲ್ಲಿತ್ತು ಎಂದರೆ ಇಲ್ಲ. ಶಾರದಮ್ಮ ರವರ ಹೆಸರಿನಲ್ಲಿ ಇದ್ದ ಆಸ್ತಿ ಅವರ ಹಕ್ಕು ಅದಿಕಾರದಲ್ಲಿ ಆಸ್ತಿ ಮಾರಾಟ ಮಾಡಿದ್ದರು ಎಂದರೆ ಸರಿ ಯಲ್ಲ. ಕಲ್ಲಿಂಗಪ್ಪ ಮತ್ತು ಮಲ್ಲಮ್ಮ ರವರಿಗೆ ಮಾರಾಟ ಮಾಡಿದರು ಎಂದರೆ ಸರಿ ಯಲ್ಲ. ಇದೇ ಶಾರದಮ್ಮ ರವರನ್ನು ಕಟ್ಟಿಗೆಹಳ್ಳಿಗೆ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನನ್ನಅಣ್ಣನ ಊರು ಕಟ್ಟಿಗೆಹಳ್ಳಿ. ಮಲ್ಲಮ್ಮನ ಅಣ್ಣಂದಿರು ನನಗೆ ಗೊತ್ತಿಲ್ಲ. ಬಸಪ್ಪ ಮತ್ತು ಶಿವಮೂರ್ತಯ್ಯ ಕೂಡ ನನಗೆ ಗೊತ್ತಿಲ್ಲ. ಶಿವಮೂರ್ತಯ್ಯ ಮತ್ತು ಬಸಪ್ಪ ಮಲ್ಲಮ್ಮನ ದೊಡ್ಡಪ್ಪನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಕಟ್ಟಿಗೆಹಳ್ಳಿಗೆ ನಾನು ಹೋಗಿಲ್ಲ ಅಲ್ಲಿ ನನಗೆ ಯಾರ ಪರಿಚಯವೂ ಇಲ್ಲ. ಪಂಚಾಯಿತಿದಾರರ ಸಮಕ್ಷಮ ಪಾಲುವಿಬಾಗಮಾಡಿಕೊಂಡಿದ್ದೆವು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮಲ್ಲಮ್ಮರವರಿಗೆ ಕೊಡಬೇಕಾದ ಬಾಗ ಕೊಡುತ್ತಿಲ್ಲ ಉದ್ದೇಶಪೂರ್ವಕವಾಗಿ ಕೊಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ

ನಂ.ಸಿ ಶೆಡ್ಯೂಲ್ ನ 2 ನೇ ಸ್ವತ್ತು, ಕೌಂಟರ್ ಕ್ಲೈಮ್ ನ ಬಿ ಶೆಡ್ಯೂಲ್ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಈ ಆಸ್ತಿ 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ಖರೀದಿ ಮಾಡಿದ ಅವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**